ಕರ್ನಾಟಕ ಸರಕಾರ

**ಆಯುಕ್ತರು, ಭೂಸ್ವಾಧೀನ, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃಷ್ಣಾ ಮೇಲ್ದಂಡೆ ಯೋಜನೆ,**
**ನವನಗರ ಬಾಗಲಕೋಟರವರ ಕಾರ್ಯಾಲಯ – 587103**

ದೂರವಾಣಿ : 08354-235925 Email : gmlaqukp@gmail.com

ನಂ:ಕಂಇ/ಭೂಸ್ವಾ-3/ಸಿಆರ್-52/2017-18 /107 ದಿನಾಂಕ: 07-06-2019.

ಇವರಿಗೆ,

ವಿಶೇಷ ಭೂಸ್ವಾಧೀನಾಧಿಕಾರಿ,
ಕೃ.ಮೇ.ಯೋ, ದೇವದುರ್ಗ
ಕ್ಯಾಂಪ್: ಚಿಕ್ಕಹೊನ್ನಕುಣಿ.

ಮಾನ್ಯರೇ,

ವಿಷಯ:- ರಾಯಚೂರ ಜಿಲ್ಲೆಯ ಮಾನ್ವಿ ತಾಲೂಕಿನ **1.ಚಿಕ್ಕಹಣಗಿ, 2.ಹಿರೇಹಣಗಿ, 3.ಪೋತಾಪೂರ, 4.ಚಿಕ್ಕಬಾದರದಿನ್ನಿ** ಗ್ರಾಮಗಳಲ್ಲಿ ನಾರಾಯಣಪೂರ ಬಲದಂಡೆ ಕಾಲುವೆ ವಿತರಣಾ ಕಾಲುವೆ ಸಂ.9(ಎ) ಅಡಿಯಲ್ಲಿ ಬರುವ ವಡವಟ್ಟಿ ಶಾಖಾ ವಿತರಣಾ ಕಾಲುವೆಯ ಲ್ಯಾ.ಸಂ.8ರ ನಿರ್ಮಾಣಕ್ಕಾಗಿ ಜಮೀನು ಭೂಸ್ವಾಧೀನಪಡಿಸಿಕೊಳ್ಳಲು ಕಲಂ 19(2)ರಡಿ ಅಂತಿಮ ಅಧಿಸೂಚನೆ ಹೊರಡಿಸಲು ಕಾಲಾವಧಿಯನ್ನು ವಿಸ್ತರಿಸುವ ಕುರಿತು.

ಉಲ್ಲೇಖ:- 1) ಈ ಕಛೇರಿ ಪತ್ರ ಸಂ.ಕಂಇ/ಭೂಸ್ವಾ-3/ಸಿಆರ್-52/17-18/840 ದಿನಾಂಕ: 13-11-2018.
2) ತಮ್ಮ ಕಛೇರಿ ಪತ್ರ ಸಂ.ಎಲ್ಎಕ್ಯೂ/ಎಸ್ಆರ್-38/16-17, ದಿನಾಂಕ: 04-04-2019 (ಈ ಕಛೇರಿ ಸ್ವೀಕೃತಿ ದಿನಾಂಕ: 08-04-2019).

-000-

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖರನ್ವಯ ರಾಯಚೂರ ಜಿಲ್ಲೆಯ ಮಾನ್ವಿ ತಾಲೂಕಿನ **1.ಚಿಕ್ಕಹಣಗಿ, 2.ಹಿರೇಹಣಗಿ, 3.ಪೋತಾಪೂರ, 4.ಚಿಕ್ಕಬಾದರದಿನ್ನಿ** ಗ್ರಾಮಗಳಲ್ಲಿ ನಾರಾಯಣಪೂರ ಬಲದಂಡೆ ಕಾಲುವೆ ವಿತರಣಾ ಕಾಲುವೆ ಸಂ.9(ಎ) ಅಡಿಯಲ್ಲಿ ಬರುವ ವಡವಟ್ಟಿ ಶಾಖಾ ವಿತರಣಾ ಕಾಲುವೆಯ ಲ್ಯಾ.ಸಂ.8ರ ನಿರ್ಮಾಣಕ್ಕಾಗಿ ಕಲಂ 11(1)ರ ಅಧಿಸೂಚನೆಯನ್ನು ದಿನಾಂಕ: 03-08-2017ರಂದು ಪ್ರಕಟಗೊಂಡಿದ್ದು ಕಲಂ 11(1)ರ ನಂತರ ಮುಂದಿನ ಪ್ರಕ್ರಿಯೆಗಾಗಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರವಸತಿ ಮತ್ತು ಪುನರವ್ಯವಸ್ಥೆಯ ಅಧಿನಿಯಮ 2013ರ ಭೂಸ್ವಾಧೀನ ಕಾಯ್ದೆ ಕಲಂ 19(7)ರ ಅನುಸಾರ ದಿನಾಂಕ: 02-10-2019ರವರೆಗೆ ಅವಧಿ ವಿಸ್ತರಿಸಲು ಕೋರಿರುತ್ತೀರಿ.

ತಮ್ಮ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಉಲ್ಲೇಖ (1)ರನ್ವಯ ಈಗಾಗಲೆ ದಿನಾಂಕ: 02-04-2019 ರವರೆಗೆ ಅವಧಿ ವಿಸ್ತರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಅಧಿನಿಯಮ 2013, ಕಲಂ 19(7)ರ (2ನೇ ವಿವರಣೆ) ಅಡಿಯಲ್ಲಿ ಸದರಿ ಪ್ರಕರಣಗಳಲ್ಲಿ ಭೂಸ್ವಾಧೀನ ಕಾಯ್ದೆಯ ಪ್ರಕಾರ ಸಂಪೂರ್ಣ ಪ್ರಕ್ರಿಯೆ ಪೂರ್ಣಗೊಳಿಸಿ ಅಧಿಸೂಚನೆಯಲ್ಲಿ ಮುಂದುವರೆಯಲು ದಿನಾಂಕ: 02-08-2019ರ ವರೆಗೆ ಅವಧಿ ವಿಸ್ತರಿಸಲಾಗಿದೆ. ಭೂಸ್ವಾಧೀನ ಕಾಯ್ದೆ ಕಲಂ 19(2)ರ (3ನೇ ವಿವರಣೆ) ರನ್ವಯ ಅಧಿಸೂಚನೆ ಹೊರಡಿಸಿ ಅಂತರ್ಜಾಲದಲ್ಲಿ ಅಪ್‌ಲೋಡ ಮಾಡಲು ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ,

ಆಯುಕ್ತರು, 7/6/19
ಪುಪು/ಭೂಸ್ವಾಧೀನ, ಕೃ.ಮೇ.ಯೋ,
ನವನಗರ, ಬಾಗಲಕೋಟೆ.
ಇವರ ಪರವಾಗಿ.

| |
|---|
| ಕಛೇರಿ ಟಿಪ್ಪಣಿ ಆಯುಕ್ತರವರಿಂದ ಅನುಮೋದಿಸಲ್ಪಟ್ಟಿದೆ. |

ಪ್ರತಿಯನ್ನು ಪುನರವಸತಿ ಅಧಿಕಾರಿ, ಕೃಮೇಯೋ, ನಾರಾಯಣಪೂರ ಇವರಿಗೆ ಮಾಹಿತಿಗಾಗಿ.

DESPATCHED.
ON 7-6-19